# ಬುಡಕಟ್ಟು ಕುಟುಂಬಗಳ ಆಶಾಕಿರಣ

**ದಟ್ಟ ಕಾಡಿನ ನಡುವೆ ನಿತ್ಯವೂ ಏಳೆಂಟು ಕಿಲೋಮೀಟರ್ ನಡೆದು ಶಾಲೆ ಕಲಿತ ಆಕೆ ಆಗಿದ್ದು ಜಿಲ್ಲಾಧಿಕಾರಿ. ಉನ್ನತ ಹುದ್ದೆಗೇರಿದ ನಂತರ ಅವರು ನಡೆದದ್ದು ಮತ್ತದೇ ಕಾಡಿನತ್ತ. ಕಾಡಿನಲ್ಲೇ ನೆಲೆಯೂರಿದ ಬುಡಕಟ್ಟು ಕುಟುಂಬಗಳ ಬದುಕನ್ನು ಬೆಳಕಾಗಿಸುವತ್ತ.**

■ ಶಶಿಕುಮಾರ್ ಸಿ.

ಅವರೆಲ್ಲ ಬಡತನದ ಬೇಗೆಯಲ್ಲಿ ಬೆಂದ ಬುಡಕಟ್ಟು ಸಮುದಾಯದವರು. ಮೂಲಸೌಕರ್ಯಗಳನ್ನು ಕಾಣದೆ, ತಳಮಟ್ಟದ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದವರು. ಈ ಸುದ್ದಿ ಕಿವಿಗೆ ಬಿದ್ದೊಡನೆ ಬಾಲ್ಯದಲ್ಲಿ ತಾನು ಅನುಭವಿಸಿದ ಕಷ್ಟಗಳು ನೆನಪಾಗಿ, ಅವರನ್ನು ಜಿಲ್ಲಾಧಿಕಾರಿಯೊಬ್ಬರು ದತ್ತು ಪಡೆದು, ಸಮಾಜದ ಮುನ್ನೆಲೆಗೆ ತರಲು ಶ್ರಮಿಸುತ್ತಿದ್ದಾರೆ.

ಅಷ್ಟಕ್ಕೂ ಆ ಜಿಲ್ಲಾಧಿಕಾರಿ ಯಾರಂತೀರಾ? ಅವರೇ ಆಂಧ್ರಪ್ರದೇಶದ ನಂದ್ಯಾಲ್ ಜಿಲ್ಲಾಧಿಕಾರಿ ರಾಜಕುಮಾರಿ ಗನಿಯಾ. ಅವರು ದತ್ತು ಪಡೆದವರು ಅದೇ ರಾಜ್ಯದ ಕರ್ನೂಲ್ ಜಿಲ್ಲೆಯ ನೇಮಿಲ್ಲಕುಂಟಾದ ಸುಮಾರು 30 ಬುಡಕಟ್ಟು ಕುಟುಂಬಗಳು.

ನೇಮಿಲ್ಲಕುಂಟಾ ಬುಡಕಟ್ಟು ಕುಟುಂಬಗಳ ವಾಸದ ತಾಣ. ಅಲ್ಲಿನವರನ್ನು ಬಡತನ ಕಿತ್ತು ತಿನ್ನುತ್ತಿದೆ. ಅಪೌಷ್ಟಿಕತೆ ಕಾಡುತ್ತಿದೆ. ತಳಮಟ್ಟದ ಸಮಸ್ಯೆಗಳಂತೂ ಅವರ ಬದುಕನ್ನು ಹಿಂಡಿಹಿಪ್ಪೆ ಮಾಡಿವೆ. ಈ ವಿಚಾರವು ವಸುಂಧರಾ ಎಂಬುವವರಿಂದ ಜಿಲ್ಲಾಧಿಕಾರಿ ಕಿವಿಗೆ ಬಿದ್ದಿತ್ತು. ಆ ಕುಟುಂಬಗಳ ಸಮಗ್ರ ಮಾಹಿತಿ ಕಲೆಹಾಕಿದ ಅವರು, ಅವರ ಬದುಕನ್ನು ಹಸನಾಗಿಸಲು ಮುಂದಾಗಿದ್ದಾರೆ.

ನೇಮಿಲ್ಲಕುಂಟಾದಲ್ಲಿನ ಸಮಸ್ಯೆಗಳು ವೈಯಕ್ತಿಕವಾಗಿ ರಾಜಕುಮಾರಿ ಗನಿಯಾ ಅವರನ್ನು ಬಹಳ ಕಾಡಿವೆ. ಅಲ್ಲಿರುವ ಸಮಸ್ಯೆಗಳು ಅವರ ಬಾಲ್ಯವನ್ನು ನೆನಪಿಸಿವೆ. ಅವರಿಗೆ ಏನಾದರೂ ಸಹಾಯ ಮಾಡಲೇಬೇಕು ಎಂಬ ಹಟದಿಂದ ಆ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಕೈಹಾಕಿದ್ದಾರೆ. ಅವರ ಈ ಯತ್ನಕ್ಕೆ ಬಲ ತುಂಬಿದ್ದು, ಅಲ್ಲಿನ ಸರ್ಕಾರದ ಪಿ4 (Public Private People Partnership) ಯೋಜನೆ. ಅದರ ನೆರವಿನಿಂದ ಕುಟುಂಬಗಳಿಗೆ ಅಗತ್ಯ ನೆರವು ಒದಗಿಸಲಾಗುತ್ತಿದೆ.

ಬುಡಕಟ್ಟು ಜನರಿಗೆ ಮೂಲಸೌಕರ್ಯ ಸೇರಿದಂತೆ ಆರೋಗ್ಯ ರಕ್ಷಣೆ ಮತ್ತು ಸುಸ್ಥಿರ ಉದ್ಯೋಗಾವಕಾಶಗಳನ್ನು ಒದಗಿಸುವುದು ರಾಜಕುಮಾರಿ ಅವರ ಮೊದಲ ಧ್ಯೇಯ. ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅವರು, ಸದ್ಯ ಸ್ಥಳೀಯ ಸಮುದಾಯ ಭವನದ ದುರಸ್ತಿಗೆ ಮುಂದಾಗಿದ್ದಾರೆ. ಅಲ್ಲಿ ಯುವಕರು ಮತ್ತು ಮಹಿಳೆಯರಿಗೆ ಉದ್ಯೋಗ ಕೌಶಲ ಕಲಿಸುವ ಕೇಂದ್ರ ಸ್ಥಾಪನೆ ಮಾಡುವ ಯೋಜನೆಯು ಕಾರ್ಯಗತಿಯಲ್ಲಿದೆ. ಸರ್ಕಾರದ ಸೌಲಭ್ಯಗಳನ್ನು ನೇಮಿಲ್ಲಕುಂಟಾಗೆ ತಲುಪಿಸುತ್ತಿದ್ದಾರೆ.


ಜಿಲ್ಲಾಧಿಕಾರಿ ರಾಜಕುಮಾರಿ ಗನಿಯಾ

### ದಟ್ಟಡವಿಯ ನಡುವೆ ಭಯದ ನಡಿಗೆ

ಬೆಟ್ಟ ಹಾಗೂ ಕಣಿವೆಗಳಿಂದ ಆವೃತವಾದ ಗ್ರಾಮ ಕೊಲ್ಲಿವಲಸ. ಅದು ಹಿಂದೆ ಕುಗ್ರಾಮವಾಗಿತ್ತು. ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ತೆಕ್ಕಲಿ ಮಂಡಲದಲ್ಲಿರುವ ಕೊಲ್ಲಿವಲಸ, ರಾಜಕುಮಾರಿ ಗನಿಯಾ ಹುಟ್ಟೂರು. ತಂದೆ ಮಾಧವರಾವ್ ರೈತರು. ತಾಯಿ ದಮಯಂತಿ ಕುಟುಂಬ ನಿರ್ವಹಣೆಯ ಜವಾಬ್ದಾರಿ ಹೊತ್ತವರು.

‘ನೇಮಿಲ್ಲಕುಂಟಾ ಬುಡಕಟ್ಟು ಕುಟುಂಬಗಳಂತೆ ನಾನೂ ಬಾಲ್ಯದಲ್ಲಿ ಹಲವಾರು ಕಷ್ಟಗಳನ್ನು, ಸಮಸ್ಯೆಗಳನ್ನು ಅನುಭವಿಸಿದ್ದೇನೆ. ಹತ್ತಾರು ಮೂಲಭೂತ ಸಮಸ್ಯೆಗಳನ್ನು ಎದುರಿಸಿರುವೆ’ ಎನ್ನುವ ಜಿಲ್ಲಾಧಿಕಾರಿ ತಮ್ಮ ಬಾಲ್ಯದ ದಿನಗಳನ್ನು ಬಿಚ್ಚಿಟ್ಟಿದ್ದು ಹೀಗೆ...

‘ನನ್ನೂರು ದಟ್ಟ ಅರಣ್ಯ ಪ್ರದೇಶದ ಒಂದು ಭಾಗ. ಸರಿಯಾದ ರಸ್ತೆ ಕೂಡ ಇರಲಿಲ್ಲ. ಓದಲು ಶಾಲೆ ಇರಲಿಲ್ಲ. ಶಾಲೆಗಾಗಿ ದೂರದ ತೆಕ್ಕಲಿಗೆ ಪ್ರಯಾಣಿಸುವುದು ಅನಿವಾರ್ಯವಾಗಿತ್ತು. ಅಲ್ಲಿಗೆ ಹೋಗಲು ನಿತ್ಯ 8 ಕಿ.ಮೀ. ನಡೆಯಬೇಕಿತ್ತು. ಆ ಹಾದಿ ದಟ್ಟ ಅರಣ್ಯ ಪ್ರದೇಶದಿಂದ ಕೂಡಿದ್ದರಿಂದ ಭಯವಾಗುತ್ತಿತ್ತು. ಇಂತಹದ್ದೇ ಹಲವು ಕಷ್ಟಗಳನ್ನೇ ಈ ಬುಡಕಟ್ಟು ಕುಟುಂಬಗಳು ಅನುಭವಿಸುತ್ತಿವೆ. ಹೀಗಾಗಿ ದತ್ತು ತೆಗೆದುಕೊಂಡು ಅಭಿವೃದ್ಧಿಗೆ ಮುಂದಾಗಿದ್ದೇನೆ’.

### ಕಾಡಿನಲ್ಲಿ ಅರಳಿದ ಹೂವು

ರಾಜಕುಮಾರಿ ಗನಿಯಾ ದಟ್ಟ ಅಡವಿಯ ನಡುವೆ ಅರಳಿದ ಹೂವು. ಅನೇಕ ತೊಡಕುಗಳನ್ನು ಎದುರಿಸಿ ಉನ್ನತ ಹುದ್ದೆಗೇರಿದ ಅವರ ಬೆನ್ನಿಗೆ ನಿಂತವರು ತಂದೆ–ತಾಯಿ. ಎಷ್ಟೇ ಕಷ್ಟಗಳು ಎದುರಾದರೂ ಓದುವುದನ್ನು ನಿಲ್ಲಿಸದೆ, ಗುರುಕುಲ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ವಿದ್ಯಾಭ್ಯಾಸ ಮಾಡಿ, ವಿಶಾಖಪಟ್ಟಣದ ಬಿವಿಕೆ ಕಾಲೇಜಿನಲ್ಲಿ ಪದವಿ ಮತ್ತು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಮುಗಿಸಿದರು. ವೃತ್ತಿಯಲ್ಲಿ ಶಿಕ್ಷಕರಾಗಿರುವ ಶ್ರೀಹರಿ ಅವರೊಂದಿಗೆ ವಿವಾಹವಾದರು.

‘ಅಪ್ಪ–ಅಮ್ಮ ಹಾಗೂ ಪತಿಯ ಪ್ರೋತ್ಸಾಹದಿಂದ ಸರ್ಕಾರಿ ಉದ್ಯೋಗಗಳಿಗೆ ಪ್ರಯತ್ನಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿ, ಹಲವಾರು ಹುದ್ದೆಗಳಿಗೆ ಪರೀಕ್ಷೆ ಬರೆದೆ. ಸಹಕಾರಿ ಇಲಾಖೆಯಲ್ಲಿ ಮೊದಲ ಸರ್ಕಾರಿ ಕೆಲಸವೂ ಸಿಕ್ಕಿತ್ತು’ ಎನ್ನುತ್ತಾರೆ. ಆ ಕೆಲಸದ ತರಬೇತಿಯಲ್ಲಿದ್ದಾಗಲೇ ಗ್ರೂಪ್1 ಪರೀಕ್ಷೆಯಲ್ಲಿ ಯಶಕಂಡರು.

ಉಪ ಕಲೆಕ್ಟರ್ ಆಗಿ ಅಧಿಕಾರ ವಹಿಸಿಕೊಂಡ ನಂತರ ಅವರು ವಿಜಯನಗರಂ, ಕಾಕಿನಾಡ, ಗುಂಟೂರು ಮತ್ತು ಪೂರ್ವ ಗೋದಾವರಿ ಜಿಲ್ಲೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

‘ನಾನು ಎಲ್ಲೇ ಇದ್ದರೂ, ನನ್ನ ಆಲೋಚನೆಗಳು ಬಡವರಿಗಾಗಿ ಮಿಡಿಯುತ್ತವೆ’ ಎನ್ನುವ ಅವರು 2016ರಲ್ಲಿ ಐಎಎಸ್ ಆಗಿ ಬಡ್ತಿ ಪಡೆದರು. ನಂದ್ಯಾಲ್ ಜಿಲ್ಲಾಧಿಕಾರಿಯಾಗಿ ಕಳೆದ ವರ್ಷ ಅಧಿಕಾರ ವಹಿಸಿಕೊಂಡಿದ್ದಾರೆ. ■